4.7ಕೋಟಿ ರೂಪಾಯಿ ಹಣವನ್ನು ಆಂಧ್ರದವರು ಕೊಟ್ಟಿದ್ದಾರೆ. 1 ಕೋಟಿ 76ಲಕ್ಷ ರೂಪಾಯಿಯಲ್ಲಿ 1 ಕೋಟಿ 47 ಲಕ್ಷ ರೂಪಾಯಿಗಳನ್ನು ಜುರಾಲಾ ಬಗ್ಗೆ ನಮಗೆ ಆಂಧ್ರದವರು ಕಾಂಪನ್ಸೇಷನ್ ಆಗಿ ಕೊಟ್ಟಿದ್ದಾರೆ. ವಂದನೆಗಳು.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಪುನಃ ಮಧ್ಯಾಹ್ನ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು)

ಸದನವು ಪುನಃ 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

(ಸಭಾಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

Regarding mismanagement of PHC.,Gudur, Guledagudda

333 - Sri. Rajashekaran Sheelavantha (Guledha gudda) : will The Minister for Health and Family welfare be pleased to state.

a) Whether the Government is aware of the mismanagement in the PHC of Gudur Village in Guledagudda constitutency.

b) What action the Government has taken on the staff responsible for the mismanagement.

Dr. H.C. Mahadevappa (Minister for Health & Family Welfare) :

a) Yes.

b) 1) The Medical Officer has been transferred and another has been posted.

2. The pharmacist has been transferred.

3. Memo had been issued to Junior Health Assistant (F), Junior Health Assistand (M) and 'D' Group official. They have informed in writing that they would work satisfactorily.

4. The Taluk Medical Officer and District Health and Family Welfare Officer are visiting frequently to ensure satisfactory functioning of the hospital. With this, there has been no subscquent complaints on this hospital.

ಶ್ರೀ ರಾಜಶೇಖರ್ ವಿ. ಶೀಲವಂತ : ಮಾನ್ಯ ಸಭಾಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಗುಡೂರು ಗ್ರಾಮದಲ್ಲಿರತಕ್ಕ ಆರೋಗ್ಯ ಕೇಂದ್ರಕ್ಕೆ ನಾನು ಸುಮಾರು ದಿವಸದ ಹಿಂದೆ ಭೇಟಿ ಕೊಟ್ಟ ನಂತರ, ಕನಿಷ್ಟ 2 ತಿಂಗಳಿಂದ ಯಾವುದೇ ರೀತಿಯ ಕ್ರಮವನ್ನು ಇಲಾಖೆಯ ಮುಖ್ಯಸ್ಥರು ತೆಗೆದುಕೊಂಡಿಲ್ಲ. ಬಿಜಾಪುರಕ್ಕೆ ಹೋಗಿ ಡಿ.ಹೆಚ್.ಓ. ರವರನ್ನು ಭೇಟಿಯಾಗಿದ್ದೆ. ಮತ್ತೊಮ್ಮೆ ಈ ರೀತಿ ದೂರು ಬಂದಿದೆ, ಈ ರೀತಿಯಲ್ಲಿ ದವಾಖಾನೆಯಲ್ಲಿ ಯಾವ ತರಹದ ಕೆಲಸಗಳೂ ನಡೆದಿಲ್ಲ. ಡಾಕ್ಟರ್ ಸರಿಯಾದ ವ್ಯವಸ್ಥೆ ಮಾಡುವ ಹಾಗಿಲ್ಲ, ಅವರು ಬರುವ ಹಾಗಿಲ್ಲ. ಈ ಸಮಸ್ಯೆ ಇದೆ, ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿ ಎಂದು ತಿಳಿಸಿದ ಮೇಲೆ, ಅವರನ್ನು ವರ್ಗಾವಣೆ ಮಾಡಿದರು. ಆದರೆ, ಇಲ್ಲಿ ವೈದ್ಯಾಧಿಕಾರಿಗಳನ್ನು ವರ್ಗಾಯಿಸಲಾಗಿದೆ ಎಂದು ಸನ್ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ವರ್ಗಾಯಿಸಿದ್ದು ನಾವು ಪತ್ರ ಕೊಟ್ಟಮೇಲೆ ವರ್ಗಾಯಿಸಿದರೋ ಅಥವಾ ನಾವು ಈ ವಿಷಯವನ್ನು ಅವರ ಗಣನೆಗೆ ತೆಗೆದುಕೊಂಡು ಬಂದಮೇಲೆ ಮಾಡಿದರೋ ಗೊತ್ತಾಗಲಿಲ್ಲ. ಅದನ್ನು ತಿಳಿಸಬೇಕು. ಆಮೇಲೆ ಈಗ ಸರಿಯಾಗಿ ನಡೆದಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಈಗ ಆ ಆಸ್ಪತ್ರೆಯಲ್ಲಿ ಖಾಯಂ ಆಗಿ ವೈದ್ಯಾಧಿಕಾರಿಗಳು ಇಲ್ಲ, ಬೇರೆ ಕಡೆಯಿಂದ ವಾರದಲ್ಲಿ ಒಂದು ದಿವಸವೋ ಎರಡು ದಿವಸವೋ ಬಂದು ಹೋಗುತ್ತಾರೆ. ಅಲ್ಲಿಗೆ ಖಾಯಂ ವೈದ್ಯಾಧಿಕಾರಿಗಳನ್ನು ಕೊಡುವಂಥ ವ್ಯವಸ್ಥೆಯನ್ನು ಅತಿ ಶೀಘ್ರದಲ್ಲಿಯೇ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಶಾಸಕರು ಅವರ ಕ್ಷೇತ್ರದಲ್ಲಿರತಕ್ಕಂಥ ಆರೋಗ್ಯ ಕೇಂದ್ರದಲ್ಲಿ, ಗುಡೂರು ಆರೋಗ್ಯ ಕೇಂದ್ರದಲ್ಲಿ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಯವರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ, ಸಮಯಕ್ಕೆ ಸರಿಯಾಗಿ ಬರುತ್ತಾ ಇಲ್ಲವೆಂದು, ಬಿಜಾಪುರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ದೂರು ಕೊಟ್ಟ ಹಿನ್ನೆಲೆಯಲ್ಲಿ ಅವರು ಬಂದು ಪರಿಶೀಲನೆ ಮಾಡಿ, ವೈದ್ಯರು ಮತ್ತು ಫಾರ್ಮಾಸಿಸ್ಟ್‌ನ್ನು ವರ್ಗಾವಣೆ ಮಾಡಬೇಕೆಂದು ಹೇಳಿದರು. ಅದರಂತೆ ವರ್ಗಾವಣೆ ಮಾಡಿದ್ದೇವೆ. ಅಲ್ಲಿರತಕ್ಕ ಫೀಮೇಲ್ ಮತ್ತು ಮೇಲ್ ಹೆಲ್ತ್ ವರ್ಕರ್ಸ್ ಮತ್ತು ಗ್ರೂಪ್ "ಡಿ" ಕೆಲಸಗಾರರಿಗೆ ಕರೆಯಿಸಿ, ಸೂಚನೆಯನ್ನು ಕೊಟ್ಟು ಸರಿಯಾಗಿ ಕೆಲಸ ಮಾಡಬೇಕೆಂದು ಹೇಳಿದಮೇಲೆ, ಬರೆದುಕೊಂಡು ಅದನ್ನು ಸರಿಯಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ಪಿ.ಎಸ್.ಸಿ. ಕ್ಯಾಂಡಿಡೇಟ್ ಬಂದರೆ, ಪರ್ಮನೆಂಟ್ ವ್ಯವಸ್ಥೆ ಆಗುತ್ತಲ್ಲ.

ಡಾ॥ ಹೆಚ್. ಸಿ. ಮಹದೇವಪ್ಪ : ಆದೆಲ್ಲಾ ಆಗುತ್ತದೆ. ಈಗ ಸುಧಾರಣೆಯಾಗಿದೆ ಮತ್ತು ಖುದ್ದಾಗಿ ನಮ್ಮ ಅಧಿಕಾರಿಗಳು ಅದನ್ನು ನೋಡುತ್ತಾರೆ.

ಶ್ರೀ ರಾಜಶೇಖರ್ ವಿ. ಶೀಲವಂತ : ಮಾನ್ಯ ಅಧ್ಯಕ್ಷರೇ, ಅಲ್ಲಿ ಇದ್ದಂತಹ 'ಡಿ' ಗ್ರೂಪ್ ನೌಕರರು ಸಹ ಪ್ರಾಕ್ಟೀಸ್ ಮಾಡುತ್ತಾರೆ. ಅವರು ಗ್ರಾಮದಲ್ಲಿ ಹೋಗಿ ಚುಚ್ಚು ಮದ್ದು ಕೊಡುವುದು ಗುಳಿಗೆ ಕೊಡುವಂತಹ ಕೆಲಸ ಮಾಡುತ್ತಾರೆ. ಆದ್ದರಿಂದ, ನಾನು ಅವರನ್ನು ಸಹ ವರ್ಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಅವರ ಕ್ಷೇತ್ರದಲ್ಲಿ ಬರತಕ್ಕಂಥ ಆಸ್ಪತ್ರೆಗಳಿಗೆ ಅವರೇ ಬೋರ್ಡ್ ಆಫ್ ವಿಜಿಟರ್ಸ್ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

ಅಧ್ಯಕ್ಷರು : ಗ್ರೂಪ್ 'ಡಿ' ನೌಕರರು ಪ್ರಾಕ್ಟೀಸ್ ಮಾಡುತ್ತಾರೆಂದು ಅವರು ಹೇಳುತ್ತಿದ್ದಾರೆ.

ಡಾ॥ ಹೆಚ್. ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಗ್ರೂಪ್ 'ಡಿ' ನೌಕರರು ಏನು ಪ್ರಾಕ್ಟೀಸ್ ಮಾಡುವುದಕ್ಕೆ ಬರುತ್ತದೆ ಸಾರ್. ನಿರ್ದಿಷ್ಟವಾದ ಪ್ರಕರಣ ಇದ್ದರೆ ನನಗೆ ಮಾಹಿತಿ ಕೊಡಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

MR. SPEAKER : Quacks. He could be a peon, he could be a forest guard, he could be a KEB line man, he could be a driver in KSRTC. He is a quack, he also practicess medicine.

DR. H.C. MAHADEVAPPA : Yes, That must be brought to the notice of the Government. Unless it is brought to the notice of the Government, we cannot take action.

MR. SPEAKER : We are closing this question.

ವಿಟ್ಲದಲ್ಲಿ ಸಮುದಾಯ ಆಸ್ಪತ್ರೆ ಮಂಜೂರಾತಿ.

334- ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯನ್ನಾಗಿ ಮಾಡುವ ಬಗ್ಗೆ ಸರ್ಕಾರಕ್ಕೆ ಒತ್ತಡ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಡಾ ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಪರಿಶೀಲನೆಯಲ್ಲಿದೆ.